02-11-2023
V-karnataka Pg 12

VK GARDENಲೋಕ

ಬಾಳೆ ಗಿಡದ ಆರೈಕೆ ಹೀಗಿರಲಿ



ಬಾಳೆ ನಮ್ಮ ರಾಜ್ಯದ ಪ್ರಮುಖ ಹಣ್ಣಿನ ಬೆಳೆ. ಎಲ್ಲಾ ಕಾಲದಲ್ಲೂ ಕಡಿಮೆ ಬೆಲೆಗೆ ಸಿಗುವ ಹಣ್ಣು ಇದು. ಇದರಲ್ಲಿ ಖನಿಜಾಂಶಗಳು ಮತ್ತು ಜೀವಸತ್ವಗಳು ಹೇರಳವಾಗಿದ್ದು ಶೇ.27 ರಷ್ಟು ಶರ್ಕರ ಪಿಷ್ಟ ಕೂಡ ಇದೆ. ಬಾಳೆಯನ್ನು ವರ್ಷದ ಯಾವುದೇ ಕಾಲದಲ್ಲಿ ನಾಟಿ ಮಾಡಬಹುದಾದರೂ, ಜೂನ್, ಜುಲೈ ತಿಂಗಳು ಅತ್ಯಂತ ಸೂಕ್ತ. ಗ್ರ್ಯಾಂಡ್ ನೈನ್ (ಜಿ-9), ರೋಬಸ್ಟಾ, ರಸಬಾಳೆ, ಏಲಕ್ಕಿ ಇತ್ಯಾದಿ ಬಾಳೆ ತಳಿಗಳನ್ನು ನೆಡಲು ಬಳಸಬಹುದು. ಗಿಡಗಳಿಗೆ ಹೆಚ್ಚಿನ ನೀರಿನ ಅವಶ್ಯಕತೆ ಇರುವುದರಿಂದ ನೀರಾವರಿಯ ಸೌಲಭ್ಯ ಹೊಂದಿರುವವರು ಇದನ್ನು ಕೈತೋಟದಲ್ಲಿ ತುಂಬ ಸುಲಭವಾಗಿ ಬೆಳೆಯಬಹುದು. ಹಾಗೆಯೇ ಇದು ಹೆಚ್ಚು ಪೋಷಕಾಂಶಗಳನ್ನು ಬಯಸುವುದರಿಂದ ಕೊಟ್ಟಿಗೆ ಗೊಬ್ಬರ/ಕಾಂಪೋಸ್ಟ್, ಬೇವಿನ ಹಿಂಡಿ, ಎರೆಹುಳು ಗೊಬ್ಬರ ಹಾಗೂ ಇತರೆ ಸಾವಯವ ಗೊಬ್ಬರಗಳನ್ನು ಬಳಸಿ ರಾಸಾಯನಿಕಮುಕ್ತ ಹಣ್ಣುಗಳನ್ನು ಪಡೆಯಬಹುದು. ನಾಟಿ ಮಾಡಿದ 3-4 ತಿಂಗಳ ನಂತರ ಮರಿ ಕಂದುಗಳು ಬರಲು ಪ್ರಾರಂಭಿಸುತ್ತವೆ. ಆದರೆ ಗೊನೆ ಬರುವವರೆಗೂ ಮರಿ ಕಂದುಗಳನ್ನು ತೆಗೆದು ಹಾಕಿ, ಗೊನೆ ಕಾಣಿಸಿಕೊಂಡ ಮೇಲೆ ಒಂದು ಕಂದನ್ನು ಮಾತ್ರ ಉಳಿಸಿಕೊಳ್ಳಬೇಕು. ಗೊನೆಯ ತುದಿಯಲ್ಲಿರುವ ಗಂಡು ಹೂ ಭಾಗವನ್ನು ಎಲ್ಲಾ ಕಾಯಿಗಳು ಕಚ್ಚಿದಾಗ ಕತ್ತರಿಸಿ ಹಾಕಬೇಕು. ಇದರಿಂದ ಇಳುವರಿ ಹೆಚ್ಚಾಗುತ್ತದೆ.

ಡಾ. ಎಂ. ಶಾಲಿನಿ
ಸಹಾಯಕ ಪ್ರಾಧ್ಯಾಪಕರು
(ತೋಟಗಾರಿಕೆ) ಕೃಷಿ ವಿವಿ, ಬೆಂಗಳೂರು

2.25 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಗೆ ಅನುಮತಿ

ಬೆಂಗಳೂರು: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ 2.25 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಗೆ ಅನುಮತಿ ನೀಡಲಾಗಿದೆ. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಗಳಂತಹ ಅಧಿಕೃತ ಸಂಗ್ರಹಣಾ ಏಜೆನ್ಸಿಗಳು ರೈತರಿಂದ 1.71 ಲಕ್ಷ ಮೆಟ್ರಿಕ್ ಟನ್ ಪರಿವರ್ತಿತ ಅಕ್ಕಿ ಸೇರಿ ಒಟ್ಟು 2.25 ಲಕ್ಷ ಮೆಟ್ರಿಕ್ ಟನ್ ಭತ್ತ ಖರೀದಿಗೆ ಅನುಮತಿ ನೀಡಲಾಗಿದ್ದು, ಪ್ರತಿ ಎಕರೆಯಿಂದ ಕನಿಷ್ಠ 25 ಕ್ವಿಂಟಲ್‌ನಿಂದ ಗರಿಷ್ಠ 40 ಕ್ವಿಂಟಲ್‌ವರೆಗೆ ಖರೀದಿಸಲು ಅವಕಾಶ ನೀಡಲಾಗಿದೆ. ಸಂಗ್ರಹಣಾ ಏಜೆನ್ಸಿಗಳು ರೈತರಿಂದ ಖರೀದಿಸಿದ ಭತ್ತವನ್ನು ಗೋದಾಮುಗಳಲ್ಲಿ ಸಂಗ್ರಹಿಸಿ ಹಲ್ಲಿಂಗ್‌ಗಾಗಿ ಹತ್ತಿರದ ನೋಂದಾಯಿತ ಅಕ್ಕಿ ಗಿರಣಿಗಳಿಗೆ ಸಾಗಾಣಿಕೆ ಮಾಡಬೇಕು. ಸಾರ್ವಜನಿಕ ವಿತರಣಾ ಪದ್ಧತಿಯಡಿ ವಿತರಿಸಲಾಗುವ ಅಕ್ಕಿಯನ್ನು ಕಡ್ಡಾಯವಾಗಿ ಸಾರವರ್ಧಿತಗೊಳಿಸಬೇಕು. ಇದಕ್ಕಾಗಿ ಬ್ಲೆಂಡರ್ ಯಂತ್ರ ಅಳವಡಿಸಿಕೊಂಡು ಹಲ್ಲಿಂಗ್ ಮಾಡಲು ಮಾಡಲು ನೋಂದಾಯಿಸಿಕೊಂಡಿರುವ ಅಕ್ಕಿ ಗಿರಣಿಗಳನ್ನೇ ಆಯ್ಕೆ ಮಾಡಿಕೊಳ್ಳಬೇಕು. ಭತ್ತ ಸರಬರಾಜು ಮಾಡಿದ ರೈತರ ಬ್ಯಾಂಕ್ ಖಾತೆಗೆ 15 ದಿನ ದೊಳಗೆ ನೇರ ನಗದು ವರ್ಗಾವಣೆ ಮಾಡಬೇಕು ಎಂದು ನಿಬಂಧನೆಗಳನ್ನು ವಿಧಿಸಲಾಗಿದೆ.

ಎಷ್ಟು ಖರೀದಿ(ಎಕರೆಗೆ)
- ಕನಿಷ್ಠ 25 ಕ್ವಿಂಟಲ್
- ಗರಿಷ್ಠ 40 ಕ್ವಿಂಟಲ್

ಧಾನ್ಯ	ಬೆಂಬಲ ಬೆಲೆ (ಪ್ರತಿ ಕ್ವಿಂಟಾಲ್‌ಗೆ)
ಭತ್ತ (ಸಾಮಾನ್ಯ)	2183 ರೂ.
ಭತ್ತ (ಗ್ರೇಡ್-ಎ)	2203 ರೂ.
ಬಿಳಿಜೋಳ (ಹೈಬ್ರಿಡ್)	3180 ರೂ.
ಬಿಳಿಜೋಳ (ಮಾಲ್ದಂಡಿ)	3225 ರೂ.
ರಾಗಿ	3846 ರೂ.

ನ.15ರಿಂದ ನೋಂದಣಿ: ಡೀಸಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್‌ಗಳನ್ನು ನ.5ರೊಳಗೆ ರಚಿಸಿ, ಮೊದಲ ಸಭೆ ನಡೆಸಬೇಕು. ನ.20ರೊಳಗಾಗಿ ಜಿಲ್ಲಾ ಮಟ್ಟದಲ್ಲಿ ಅಕ್ಕಿ ಗಿರಣಿಗಳ ಹಲ್ಲಿಂಗ್ ಸಾಮರ್ಥ್ಯ, ಭತ್ತ ಸಂಗ್ರಹಣಾ ಸಾಮರ್ಥ್ಯ ಬಗ್ಗೆ ಮಾಹಿತಿ ಸಂಗ್ರಹಿಸಬೇಕು. ಬೆಂಬಲ ಬೆಲೆಯಡಿ ಭತ್ತ ಖರೀದಿ ಬಗ್ಗೆ ಡಿ.30ರವರೆಗೆ ರೈತರಿಗೆ ಸೂಕ್ತ ಮಾಹಿತಿ ನೀಡಬೇಕು. ಭತ್ತ ಸರಬರಾಜು ಮಾಡಲು ಮುಂದೆ ಬರುವ ರೈತರಿಗೆ ನ.15ರಿಂದ ನೋಂದಣಿ ಮಾಡಿಕೊ ಳ್ಳಲು ಅವಕಾಶವಿದ್ದು, ಡಿ.31ರೊಳಗಾಗಿ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಡಿ.31ರಿಂದ 2024ರ ಮಾ.31ರೊಳಗಾಗಿ ರೈತರಿಂದ ಭತ್ತ ಖರೀದಿಸಿ, ಮಿಲ್‌ಗಳಲ್ಲಿ ಶೇಖರಿಸಿ, ಸಾರವರ್ಧಿತ ಅಕ್ಕಿಯನ್ನಾಗಿ ಪರಿವರ್ತಿಸುವ ಕಾರ್ಯ ಪೂರ್ಣಗೊಂಡಿರಬೇಕು ಎಂದು ಷರತ್ತು ವಿಧಿಸಲಾಗಿದೆ.

02-11-2023
Udayavani Pg 07

ಗೋಮಯ-ಗೋಮೂತ್ರದ ಗರಿಮೆ



ಪ್ರಪಂಚದ ಯಾವುದೇ ಪ್ರಾಣಿ-ಪಕ್ಷಿಗಳ ಮಲ, ಮೂತ್ರಕ್ಕೆ ಇತಿಹಾಸದ್ದುದ್ದಕ್ಕೂ ಮಹತ್ವ ನೀಡಲಾಗಿಲ್ಲ. ಆದರೆ, ಗೋವಿನ ಮಲ-ಮೂತ್ರಕ್ಕೆ ಮಾತ್ರ ವಿಶಿಷ್ಟವಾದ ಮತ್ತು ಪವಿತ್ರವಾದ ಸ್ಥಾನ ನೀಡಲಾಗಿದ್ದು, ಗೋಮಯ ಅಥವಾ ಸಗಣಿ ಮತ್ತು ಗೋಮೂತ್ರವೆಂಬ ಹೆಸರಿನಿಂದ ಗುರುತಿಸಲಾಗಿದೆ. ಹಾಗೆಯೇ ಆಧುನಿಕ ಯುಗದಲ್ಲಿ ಒಟ್ಟು ಎಂಟು ಪ್ರಾಣಿಗಳ ಮೂತ್ರವನ್ನು ಮಾತ್ರ ವೈದ್ಯಕೀಯ ರಂಗದಲ್ಲಿ ಉಪಯೋಗಿಸಲಾಗುತ್ತಿದೆ. ಆದರೆ ಅವುಗಳಲ್ಲೆಲ್ಲ ಭಾರತೀಯ ಗೋವಿನ ಮೂತ್ರವೇ ಅತ್ಯಂತ ಶ್ರೇಷ್ಠ ಮತ್ತು ಪರಿಣಾಮಕಾರಿ ಎಂಬುದು ಸಾಬೀತಾಗಿದೆ. ಗೋಮೂತ್ರದಲ್ಲಿರುವ ರೋಗ ನಿರೋಧಕ ಗುಣಗಳ ಬಗ್ಗೆ 'ಕೇಂದ್ರೀಯ ವೈಜ್ಞಾನಿಕ ಮತ್ತು ಔದ್ಯೋಗಿಕ ಸಂಶೋಧನಾ ಕೇಂದ್ರ'(ATPS) ಕೂಡ ದೃಢೀಕರಿಸಿರುವುದು ಇದರ ಹೆಗ್ಗಳಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ. ಇನ್ನು ಗೋಮಯವನ್ನು ಭಾರತೀಯ ಸಂಸ್ಕೃತಿಯಲ್ಲಿ ಅತ್ಯಂತ ಪವಿತ್ರ ಹಾಗೂ ಶುದ್ಧ ಮಾಡುವ ವಸ್ತುವಾಗಿ ಗುರುತಿಸಿರುವುದಷ್ಟೇ ಅಲ್ಲದೆ, ಪ್ರಮುಖ ಗ್ರಾಮೀಣ ಇಂಧನವಾಗಿ, ಕೃಷಿಯ ಮೂಲವಾಗಿ ಬಳಸಲಾಗುತ್ತಿದೆ. ಹೀಗೆ ಭಾರತೀಯ ಗೋವಿನ ಗೋಮೂತ್ರ ಮತ್ತು ಗೋಮಯದಲ್ಲಿರುವ ವೈಶಿಷ್ಟ್ಯತೆ ಇನ್ನಾವುದೇ ವಿದೇಶಿ ತಳಿ ಅಥವಾ ಎಮ್ಮೆಗಳಲ್ಲಿ ಇಲ್ಲದಿರುವುದು ಸಾಬೀತಾಗಿದೆ.

■ ಕೆ.ಎನ್.ಶೈಲೇಶ್ ಹೊಳ್ಳ

02-11-2023
Vijayavani Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in